ನೈನಾ. ಲತಾಬೇನ್ ಹತ್ತರ ಪ್ರಾಯದಲ್ಲೂ ರವೀಂದ್ರನನ್ನು ಪಕ್ಕದಲ್ಲಿ ಮಲಗಿಸಿಕೊಂಡು, ಅವನ ಕೈಗಳನ್ನು ಸದಾ ಬಲವಾಗಿ ಹಿಡಿದಿಟ್ಟುಕೊಳ್ಳುತ್ತಿದ್ದರು. ಯಾಕೆಂದರೆ, ಮಗನಿಗೆ ನಿದ್ದೆಯಲ್ಲಿ ನಡೆಯುವ ಕಾಯಿಲೆ ಇತ್ತು. ಗಾಢ ನಿದ್ದೆಯಲ್ಲಿದ್ದಾಗ ಕನವರಿಸುತ್ತಾ ಏನೇನೋ ಬಡಬಡಿಸುವುದೂ ಅವನ ಜಾಯಮಾನವಾಗಿತ್ತು.

ಮಗ ಎಲ್ಲಿ ಬೀದಿ ಬಸವನಂತಾಗಿಬಿಡುತ್ತಾನೋ ಎಂಬ ಆತಂಕದಲ್ಲಿ ಅವರು, 'ಒಂದೋ ಆರ್ಮಿ ಸ್ಕೂಲ್ ಸೇರು. ಇಲ್ಲವೇ ಕ್ರಿಕೆಟ್ ಬಂಗ್ಲೋಗೆ ಆಟ ಕಲಿಯಲು ಹೋಗು' ಎಂದು ತಾಕೀತು ಮಾಡಿದರು. ಆರ್ಮಿ ಸ್ಕೂಲ್ ಎಂದರೆ ವಸತಿಶಾಲೆ. ಮನೆಯಿಂದ ಹೊರಗೆ ದಬ್ಬಿಸಿಕೊಂಡಂತೆಯೇ ಸರಿ. ಅದಕ್ಕೇ ಇನ್ನೊಂದನ್ನು ರವೀಂದ್ರ ಆಯ್ಕೆ ಮಾಡಿಕೊಂಡದ್ದು. ಮಹೇಂದ್ರ ಸಿನ್ಹ ಚೌಹಾಣ್ ಎಂಬುವವರು ರವೀಂದ್ರನ ತಂದೆಗೆ ಪರಿಚಿತರು. ಕ್ರಿಕೆಟ್ ಬಂಗ್ಲೋ ಎನ್ನುವುದು ಐಷಾರಾಮಿ ಹೆಸರಷ್ಟೆ. ಅಲ್ಲೊಂದು ಸಣ್ಣ ಪೆವಿಲಿಯನ್ ಇತ್ತು. ಅದಕ್ಕೆ ಹೊಂದಿಕೊಂಡಂತೆ ಬಟಾಬಯಲು. ಹುಲ್ಲಿನ ಹಾಸೂ ಇರಲಿಲ್ಲ. ಅಲ್ಲಿಯೇ ಮಹೇಂದ್ರ ಸಿನ್ಹ ಕ್ರಿಕೆಟ್ ಪಾಠಗಳನ್ನು ಹೇಳಿಕೊಡುತ್ತಿದ್ದರು. ಅವರೇನೂ ಯಾವುದೋ ನೋಂದಾಯಿತ ಸಂಸ್ಥೆಯ ತರಬೇತುದಾರರೇನೂ ಅಲ್ಲ. ಆದರೆ, ಶಿಸ್ತಿನ ಮನುಷ್ಯ. ಗುಜರಾತ್‌ನ ಜಾಮ್‌ನಗರದಲ್ಲಿ ಅವರ ಹೆಸರು ಚಿರಪರಿಚಿತವಾಗಿತ್ತು. ಸರ್ಕಾರದ ಅನುದಾನದಿಂದ ಕ್ರಿಕೆಟ್ ಬಂಗ್ಲೋ ನಡೆಯುತ್ತಿದ್ದುದರಿಂದ ಅದಕ್ಕೆ ಘನತೆಯೂ ಇತ್ತು.

ಮಹೇಂದ್ರ ಸಿನ್ಹ ಕಲಿಸುತ್ತಿದ್ದ ರೀತಿ ವಿಚಿತ್ರ. ಸ್ಪಿನ್ನರ್‌ಗೆ ಫ್ಲೈಟ್ ಮಾಡುವುದನ್ನು ಹೇಳಿಕೊಡಲು ಅವರು ಪಿಚ್‌ನ ಮಧ್ಯದಲ್ಲಿ ಕುಳ್ಳಗಿನ ಹುಡುಗನನ್ನು ನಿಲ್ಲಿಸಿ, ಅವನ ತಲೆಮೇಲೆ ಚೆಂಡು ಹಾಕುವಂತೆ ಬೌಲರ್‌ನನ್ನು ಪ್ರೇರೇಪಿಸುತ್ತಿದ್ದರು. ಮೊದಲ ಸ್ಲಿಪ್‌ನಲ್ಲಿ ಖುದ್ದು ನಿಂತುಕೊಂಡು, ಪಂದ್ಯಗಳನ್ನು ಆಡಿಸುತ್ತಿದ್ದರು. ಒಮ್ಮೆ ರವೀಂದ್ರನಿಗೆ ಮೊದಲ ಓವರ್ ಬೌಲಿಂಗ್ ಕೊಟ್ಟರು. ವಿಪರೀತ ರನ್‌ಗಳು ಹೋದವು. ಇನ್ನೊಂದು ಪಂದ್ಯದಲ್ಲಿಯೂ ಹಾಗೆಯೇ ಮಾಡಿದರು. ಅಲ್ಲಿಯೂ ರವೀಂದ್ರ ತಪ್ಪುಗಳನ್ನು ಮುಂದುವರಿಸಿದಾಗ, ತಕ್ಷಣ ಮೊದಲ ಸ್ಲಿಪ್‌ನಿಂದ ಅವನತ್ತ ನಡೆದು, ಏನೊಂದೂ ಮಾತನಾಡದೆ ಕಪಾಳಕ್ಕೆ ಬಾರಿಸಿದರು. ಆ ಪಂದ್ಯದಲ್ಲಿ ರವೀಂದ್ರ ವಿಕೆಟ್‌ಗಳನ್ನು ಪಡೆದ. ಫೀಲ್ಡಿಂಗ್ ವಿಷಯದಲ್ಲಂತೂ ಮಹೇಂದ್ರ ಸಿನ್ಹ ಕಟ್ಟುನಿಟ್ಟು. ಡೈವ್ ಬಿದ್ದೇ ಚೆಂಡು ಹಿಡಿಯಬೇಕು. ಹಿಡಿದದ್ದೇ ತಡ ಫ್ಲ್ಯಾಟ್ ಆಗಿ ಚೆಂಡನ್ನು ಎಸೆಯಬೇಕು. ಆಕಾಶಕ್ಕೆ ಚೆಂಡು ಎಸೆದರೆ ತಲೆಮೇಲೆ ಮೊಟಕುತ್ತಿದ್ದರು. ಫೀಲ್ಡಿಂಗ್ ಅಭ್ಯಾಸ ಮಾಡಿದ ಹುಡುಗರ ಮಂಡಿ, ಮೊಣಕೈನಲ್ಲಿ ತರಚುಗಾಯಗಳಾಗಿ ರಕ್ತ ಸೋರುವುದು ಮಾಮೂಲಾಗಿತ್ತು. ರವೀಂದ್ರ ಜಡೇಜಾ ಈಗ ದೊಡ್ಡ ಫೀಲ್ಡರ್ ಆಗಿ ರೂಪುಗೊಳ್ಳಲು ಅವರ ಆ ಪಾಠವೇ ಕಾರಣ.

ಕ್ರಿಕೆಟ್‌ನಲ್ಲಿ ತನ್ನ ತಮ್ಮ ಸಾಧನೆಯ ಹಾದಿಯಲ್ಲಿರುವ ಸಂಗತಿ ಅಕ್ಕ ನೈನಾಗೂ ಮೊದಲು ಗೊತ್ತಿರಲಿಲ್ಲ. ಕಿಟ್‌ನ ಭಾರ ಹೊತ್ತು ಸಾಗಲು ಅನುಕೂಲವಾಗಲಿ ಎಂದು ರವೀಂದ್ರ ಒಂದು ಪಲ್ಸರ್ ಬೈಕ್ ಅನ್ನು ಕಂತಿನಲ್ಲಿ ಹಣ ಕಟ್ಟುವುದಾಗಿ ಹೇಳಿ ಖರೀದಿಸಿದ ಸ್ವಲ್ಪ ದಿನಗಳಲ್ಲೇ ತಾಯಿ ಅಡುಗೆಮನೆಯಲ್ಲಿ ಬೆಂಕಿ ಅವಘಡಕ್ಕೆ ಒಳಗಾದರು. ಅಪಶಕುನ ಎಂದು ಆ ಬೈಕನ್ನು ಮಾರಲಾಯಿತು. ಆ ಅಪಘಾತವೇ ಗಂಭೀರವಾಗಿ ತಾಯಿ ತೀರಿಹೋದರು. ಅದಾಗಿ ಹನ್ನೆರಡು ದಿನ ಕಳೆಯುವಷ್ಟರಲ್ಲಿ ರವೀಂದ್ರ ಜಡೇಜಾಗೆ ಪ್ರಥಮ ದರ್ಜೆ ಕ್ರಿಕೆಟ್ ಆಡುವ ಅವಕಾಶ ಸಿಕ್ಕಿತು. ಅಲ್ಲಿಂದ 19 ವರ್ಷದೊಳಗಿನವರ ತಂಡದಲ್ಲಿ ಅವಕಾಶ. ಅದರಲ್ಲಿ ಗಳಿಸಿದ ಹಣದಿಂದ ಕೊಂಡುಕೊಂಡ ಕಪ್ಪು ಬಣ್ಣದ ಹ್ಯುಂಡೈ ಅಸೆಂಟ್ ಕಾರಿನ ಮೇಲೆ 'ಲೈಫ್ ಈಸ್ ಕ್ರಿಕೆಟ್' ಎಂಬ ಒಕ್ಕಣೆ!

'ಇಂಡಿಯನ್ ಪ್ರೀಮಿಯರ್ ಲೀಗ್'ನಲ್ಲಿ (ಐಪಿಎಲ್) 'ಮುಂಬೈ ಇಂಡಿಯನ್ಸ್' ತಂಡದ ಪರವಾಗಿ ಆಡುತ್ತಿದ್ದ ಋತುವೊಂದರಲ್ಲಿ ಸಂಬಳದ ವಿಷಯದಲ್ಲಿ ಹಗ್ಗಜಗ್ಗಾಟಕ್ಕೆ ಇಳಿದು, ಒಂದು ವರ್ಷ ನಿಷೇಧಕ್ಕೆ ಒಳಗಾಗಿದ್ದವರು ಇದೇ ಜಡೇಜಾ. ಹಾಗೆ ನಿಷೇಧಕ್ಕೆ ಒಳಗಾದ ಸಂದರ್ಭದಲ್ಲಿ ಮನೆಯಲ್ಲಿ ಸ್ಮಶಾನಮೌನ. ಅಕ್ಕ ನೈನಾ ಟಿ.ವಿ. ಬಂದ್ ಮಾಡಿದ್ದರು. ಅಪ್ಪಿತಪ್ಪಿ ಕೂಡ ಯಾರೂ ಐಪಿಎಲ್ ಪಂದ್ಯ ಹಾಕುವಂತಿಲ್ಲ ಎಂದು ಮನೆಯ ಎಲ್ಲರಿಗೂ ಫರ್ಮಾನು ಹೊರಡಿಸಿದ್ದರು. ತಮ್ಮ ಬಿಕ್ಕುತ್ತಿದ್ದ ದನಿ ಅಕ್ಕನಿಗೆ ಕೇಳಿಸಿತ್ತು.




2012ರಲ್ಲಿ ಇದೇ ರವೀಂದ್ರನನ್ನು 9.8 ಕೋಟಿ ರೂಪಾಯಿಗೆ ಚೆನ್ನೈ ಸೂಪರ್‌ಕಿಂಗ್ಸ್ ಹರಾಜು ಕೂಗಿ ಪಡೆದುಕೊಂಡಿತು. ಬಿಕ್ಕಿದ್ದ ಹುಡುಗ ಧಿಗ್ಗನೆದ್ದದ್ದಕ್ಕೆ ರನ್‌ಗಳ ಬಲವಿತ್ತು.

ಹದಿನೆಂಟನೇ ವಯಸ್ಸಿನಲ್ಲಿ ಸೌರಾಷ್ಟ್ರ ತಂಡದ ಪರವಾಗಿ ದುಲೀಪ್ ಟ್ರೋಫಿ ಆಡಿ, 20ನೇ ವಯಸ್ಸಿನಲ್ಲಿ ರಾಯಸ್ಥಾನ್ ರಾಯಲ್ಸ್ ಐಪಿಎಲ್ ತಂಡಕ್ಕೆ ಆಯ್ಕೆಯಾಗಿ, ನಾಯಕ ಶೇನ್ ವಾರ್ನ್ ಬಾಯಿಂದ 'ರಾಕ್‌ಸ್ಟಾರ್' ಎಂಬ ಬಿರುದು ಪಡೆದು, 21ನೇ ವಯಸ್ಸಿನಲ್ಲಿ ಅಂತರರಾಷ್ಟ್ರೀಯ ಟ್ವೆಂಟಿ20 ತಂಡಕ್ಕೆ ಆಯ್ಕೆಯಾಗಿ, ಆಮೇಲೆ ಏಕದಿನದ ಪಂದ್ಯಗಳ ತಂಡದಲ್ಲೂ ಅವಕಾಶ ಪಡೆದುಕೊಂಡ ರವೀಂದ್ರ ಟೀಕೆಗಳ ಕೂರಂಬುಗಳನ್ನು ಎದುರಿಸುತ್ತಲೇ ಬಂದವರು. ಟೆಸ್ಟ್ ಕ್ರಿಕೆಟ್‌ಗೆ ನಾಲಾಯಕ್ಕು ಎನ್ನುತ್ತಿದ್ದವರಿಗೆ ಉತ್ತರಿಸಲೋ ಎಂಬಂತೆ 2012ರ ರಣಜಿ ಋತುವಿನಲ್ಲಿ ಎರಡು ತ್ರಿಶತಕಗಳನ್ನು ನಾಲ್ಕು ಪಂದ್ಯಗಳಲ್ಲಿ ಗಳಿಸಿದರು. ಇಂಗ್ಲೆಂಡ್ ವಿರುದ್ಧ ನಡೆದ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯದಲ್ಲಿ ಆಡುವ ಅವಕಾಶ ಸಿಗಲು ಕಾರಣವಾದ ಋತು ಅದು. ಇಂಗ್ಲೆಂಡ್ ಎದುರು 70 ಓವರ್ ಬೌಲ್ ಮಾಡಿ, 117 ರನ್ ನೀಡಿ 3 ವಿಕೆಟ್ ಪಡೆದು ತನ್ನ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದರು.

ಕಳೆದ ಐದು ವರ್ಷಗಳಲ್ಲಿ ರವೀಂದ್ರ 1441 ರನ್‌ಗಳನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಗಳಿಸಿದ್ದಾರೆ. 43 ಇನಿಂಗ್ಸ್‌ಗಳ ಪೈಕಿ 14 ಸಲ ಅರ್ಧ ಶತಕಕ್ಕೂ ಹೆಚ್ಚು ರನ್‌ಗಳು ಹರಿದುಬಂದಿವೆ. 6ನೇ ವಿಕೆಟ್ ಬಿದ್ದ ನಂತರ ತಂಡ ಗಳಿಸಿದ ಒಟ್ಟು ಸ್ಕೋರ್‌ನ ಮೂರನೇ ಒಂದು ಭಾಗ ಇವರ ಬ್ಯಾಟ್‌ನಿಂದಲೇ ಬಂದಿವೆ ಎನ್ನುವುದು ಸ್ಥಿರತೆಗೆ ಸಾಕ್ಷಿ. ಮೊನ್ನೆ ಶ್ರೀಲಂಕಾ ಎದುರಿನ ಪಂದ್ಯದಲ್ಲಿಯೂ ಕೊನೆಯ 223 ರನ್‌ಗಳಲ್ಲಿ 140 ರನ್‌ಗಳು ಇವರ ಬ್ಯಾಟ್‌ನಿಂದಲೇ ಬಂದವು. ಆ ರನ್‌ಗಳೆಲ್ಲ ಆರು ವಿಕೆಟ್‌ಗಳು ಬಿದ್ದಮೇಲೆ ಬಂದಂಥವು.

ಅಂದುಕೊಂಡಂತೆ ಪುಲ್‌ಗಳನ್ನು, ಹುಕ್‌ಗಳನ್ನು ಮಾಡಿ ಖುಷಿಯಾದಾಗ ಬ್ಯಾಟನ್ನು ಕತ್ತಿಯಂತೆ ಬೀಸುವ ರವೀಂದ್ರರ 'ರಾಕ್‌ಸ್ಟಾರ್' ವ್ಯಕ್ತಿತ್ವ ಈಗಲೂ ಕಾಡುತ್ತದೆ. ಆಟವಿನ್ನೂ ಬಾಕಿ ಇದೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಅವರೀಗ ನಂಬರ್ ಒನ್ ಆಲ್‌ರೌಂಡರ್.

**ಪ್ರತಿಕ್ರಿಯಿಸಿ: feedback@sudha.co.in**